ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ
**E-mail ID: icps.kar@gmail.com** **Ph.No.080-22879383/82**

ಸಂಖ್ಯೆ: ಕೆಎಸ್‌ಐಸಿಪಿಎಸ್/ಆ.ಸ/15/2020-21 ದಿನಾಂಕ:03.11.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಮಕ್ಕಳ ಕಲ್ಯಾಣ ಸಮಿತಿಗಳಿಗೆ (C.W.C) ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಬಾಲನ್ಯಾಯ ಮಂಡಲಿಗೆ (JJB) ಸದಸ್ಯರುಗಳನ್ನು ನೇಮಕ ಮಾಡಲು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016 ರನ್ವಯ ಆಯ್ಕೆ ಸಮಿತಿಯನ್ನು ರಚಿಸುವ ಬಗ್ಗೆ

ಉಲ್ಲೇಖ : ಈ ಕಛೇರಿಯ ಸಮಸಂಖ್ಯೆ ದಿನಾಂಕ:13-10-2020ರ ಪತ್ರಿಕಾ ಪ್ರಕಟಣೆ

*** *** ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ 30ಜಿಲ್ಲೆಗಳ ಮಕ್ಕಳ ಕಲ್ಯಾಣ ಸಮಿತಿಗಳಿಗೆ (C.W.C) ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಬಾಲನ್ಯಾಯ ಮಂಡಲಿಗೆ (JJB) ಸದಸ್ಯರುಗಳನ್ನು ನೇಮಕ ಮಾಡಲು ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016ರನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಿ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ಉಲ್ಲೇಖಿತದನ್ವಯ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಹಾಗೂ ಬಾಲನ್ಯಾಯಮಂಡಲಿಗಳಿಗೆ ಸದಸ್ಯರುಗಳನ್ನು ಆಯ್ಕೆ ಮಾಡುವ ಕುರಿತಂತೆ ಹೊರಡಿಸಲಾಗಿರುವ ಪ್ರಕಟಣೆಯಂತೆ ತಮ್ಮ ಕಛೇರಿಯಿಂದಲೂ ಪ್ರಕಟಣೆ ಹೊರಡಿಸಿರುತ್ತೀರಿ. ಆದರೆ ಇಷ್ಟರಿಂದಲೇ ಅನುಭವಿ, ವಿದ್ಯಾವಂತ, ಮಕ್ಕಳ ಪಾಲನೆ ರಕ್ಷಣೆ ಬಗ್ಗೆ ಕಾಳಜಿಯುಳಂತಹ ಅಭ್ಯರ್ಥಿಗಳು ಅರ್ಜಿಸಲ್ಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಮ್ಮೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ತಮ್ಮ ಸುತ್ತಮುತ್ತಲಿನ ಉದ್ಯೋಗಿ ಸ್ನೇಹಿತರುಗಳೆಲ್ಲರು ಮುತುವರ್ಜಿವಹಿಸಿ ಕ್ರಮ ಕೈಗೊಂಡು ತಮ್ಮ ಹಂತದಲ್ಲೂ ಸಹ ಕ್ರಮವಹಿಸುವಂತೆ ಕೋರಿದೆ. ಹಾಗೂ ಸ್ಥಳೀಯ ದಿನಪತ್ರಿಕೆಗಳಲ್ಲೂ, ಜಿಲ್ಲಾ ಬುಲೇಟಿನ್‌ನ್ನಲ್ಲೂ ಹಾಗೂ ತಮ್ಮ ಕಛೇರಿಯ ಮತ್ತು ಸಂಬಂಧಪಟ್ಟ ಕಛೇರಿಯ ಪ್ರಕಟಣಾ ಫಲಕಗಳಲ್ಲೂ ವ್ಯಾಪಕ ಪ್ರಚಾರ ನಡೆಸಿ ಮಕ್ಕಳ ಪಾಲನೆ ಮತ್ತು ರಕ್ಷಣೆಯ ವಿಷಯವಾಗಿ ಉತ್ತಮವಾಗಿ ಸೇವೆಸಲ್ಲಿಸಿರುವಂತಹ ಹಾಗೂ ಈ ಕ್ಷೇತ್ರದಲ್ಲಿ ಉತ್ತಮವಾಗಿ ವ್ಯಾಸಂಗ ಮಾಡಿ ಪದವಿ ಪಡೆದಿರುವಂತಹ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಕ್ರಮಕೈಗೊಳ್ಳಲು ಕೋರಿದೆ.

ತಮ್ಮ ವಿಶ್ವಾಸಿ,

ಯೋಜನಾ ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

mvlp